# ಗುಣಪಡಿಸುವ ಕರ



## ಗುಣಪಡಿಸುವ ಕರ

ಇಂಗ್ಲೆಡ್ ದೇಶದಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದವನು ಜಿಮ್. ಈ ಜಿಮ್ ಬಹು ಚಿಕ್ಕ ಹುಡುಗನಾಗಿದ್ದಾಗಲೇ ಅವನ ತಂದೆಯು ಅನಾರೋಗ್ಯದ ನಿಮಿತ ತೀರಿಹೋದರು. ಆದರೆ ಅವನ ತಾಯಿಯು ಅವನನ್ನು ಬಹಳವಾಗಿ ಪ್ರೀತಿಸಿ,ಕಷ್ಟಪಟ್ಟು ಅವನನ್ನು ಓದಿಸಿದಳು.ಪ್ರತಿ ದಿನವು ದೇವರ ಬಗ್ಗೆ ಹೇಳಿಕೊಡುತ್ತಾ ದೇವ ಭಕ್ತಿಯಲ್ಲಿ ಅವನನ್ನು ಬೆಳೆಸುತ್ತಾ ಬಂದಳು. ಕೆಲವು ದಿನಗಳ ನಂತರ ಇದ್ದಕ್ಕಿದಂತೆ ಆಕೆಯು ಒಂದು ಮರಣಕರ ರೋಗದ ನಿಮಿತ ಸತ್ತು ಹೋದಳು.

ಅನಂತರ ಜಿಮ್ ಸಂಬಧಿಕರುಗಳ ಸಹಾಯದಿಂದ ಅನಾಥ ಆಶ್ರಮಕ್ಕೆ ಸೇರಿಸಲ್ಪಟ್ಟನು. ವ್ಯಾಸಂಗವನ್ನು ಮುಂದುವರಿಸಲು ಸಾಧ್ಯವಾಗದ ಜಿಮ್ ಚಿಕ್ಕ ವಯಸ್ಸಿನಲ್ಲಿಯೇ ಕೆಲಸಕ್ಕೆ ಹೊರಟನು.ಒಂದು ಅಂಗಡಿಯಲ್ಲಿ ಚಿಕ್ಕ ಒಂದು ಕೆಲಸವನ್ನು ಮಾಡುತ್ತಾ ಬಂದನು. ಅವನು ತನ್ನ ಕೆಲಸಕ್ಕೆ ಹೊರಡುವಾಗ ಸರಿಯಾಗಿ ಬೆಳಗ್ಗೆ **8.00** ಘಂಟೆಗೆ ಅಲ್ಲಿರುವಂತ ದೇವಾಲಯಕ್ಕೆ ಹೋಗುವನು. ಒಳಗೆ ಪ್ರವೇಶಿಸಿದ ತಕ್ಷಣ, ಎರಡು ಕೈಯನ್ನು ಜೋಡಿಸಿ,"ಯೇಸು ಸ್ವಾಮಿ ನಾನು ಜಿಮ್ ಬಂದಿದ್ದೇನೆ." ಎಂದು ಒಂದು ಮಾತನ್ನು ಮಾತ್ರ ಪ್ರತಿದಿನವು ಹೇಳಿ ಹೋಗಿ ಬಿಡುತ್ತಿದ್ದನು.

ಬೆಳಗ್ಗೆ **8.00** ಘಂಟೆಗೆ ಜಿಮ್ ಹೇಗೂ ದೇವಾಲಯದಲ್ಲಿ ಇರುತ್ತಿದ್ದನು. ಅವನು ಅಲ್ಲಿ ಬಂದು ಹೋಗುವಂತದ್ದು ಒಂದು ವಾಡಿಕೆಯ ಕಾರ್ಯವಾಗಿಬಿಟ್ಟಿತು. ಹೀಗೆ ಒಂದು ಸಾರಿ ದೇವಾಲಯಕ್ಕೆ ಬಂದು ನಂತರ ಹೊರಟು ರೋಡನ್ನು ದಾಟುತ್ತಿರುವಾಗ ವೇಗವಾಗಿ ಬಂದಂತ ಒಂದು ಬೈಕಿಂದ ಗುದ್ದಲ್ಪಟ್ಟು ಎಸೆಯಲ್ಪಟ್ಟನು. ಕೈ ಕಾಲುಗಳಿಗೆ ಬಲವಾದ ಏಟಾಗಿ ಬಹಳ ರಕ್ತಸೋರುತ್ತಿತ್ತು. ಅದೇ ಸ್ಥಳದಲ್ಲಿ ತನ್ನ ಪ್ರಜ್ಞೆಯನ್ನು ಕಳಕೊಂಡವನಾಗಿ ಬಿದ್ದನು. ಅಲ್ಲಿದ್ದಂತ ಜನರು ಅವನನ್ನು ಆಸ್ಪತ್ರೆಗೆ ಸೇರಿಸಿದರು. ಡಾಕ್ಟರುಗಳು ತಕ್ಷಣ ಅವನಿಗೆ ಚಿಕಿತ್ಸೆಯನ್ನು ಮಾಡಿದರು.

ಆದರೆ ಅಂದೆಲ್ಲಾ ಅವನು ಕಣ್ಣನು ತೆರೆಯಲೇ ಇಲ್ಲ. ಮಾರನೆ ದಿನ ಬೆಳಗ್ಗೆ ಜಿಮ್ಮಿಗೆ ಪ್ರಜ್ಞೆ ಬಂದಿತು. ಆದರೆ ಅವನು ತನ್ನ ಹಾಸಿಗೆಯನ್ನು ಬಿಟ್ಟು ಏಳಲು ಆಗದ ಒಂದು ಸ್ಥಿತಿಯಲ್ಲಿ ಇದ್ದನು. ನಿಧಾನವಾಗಿ ಕಣ್ಣನು ತೆರೆದು ನೋಡಿದನು. ಆದರೆ ಅವನ ಹತ್ತಿರ ಯಾರು ಇಲ್ಲ ಆದರೆ ಅಲ್ಲಿ ಗೋಡೆಯಲ್ಲಿದ್ದಂತ ಗಡಿಯಾರದಲ್ಲಿ ಸಮಯವು ಸರಿಯಾಗಿ **8.00** ಘಂಟೆಯಾಗಿದ್ದಿತು.

ಅಯ್ಯೋ! ನಾನು **8.00** ಘಂಟೆಗೆ ಸರಿಯಾಗಿ ದೇವಾಲಯದಲ್ಲಿ ಇರುತ್ತಿದ್ದೆನು ಎಂಬ ನೆನಪು ಬಂದಿತು. ಆದರೆ ಏನು ಮಾಡುವದು ಎದ್ದೇಳಲು ಸಾಧ್ಯವಿಲ್ಲ. ಅವನ ಕಣ್ಣಿನಲ್ಲಿ ಕಣ್ಣೀರು ಹರಿಯಲಾರಂಭಿಸಿತು. ಅವನ ಬಾಯಿಯಲ್ಲಿ ಗುರುಗುಟ್ಟುವ ಶಬ್ಧ......"ಯೇಸು ಸ್ವಾಮಿ ಇಂದು ನಿನ್ನನ್ನು ನೋಡ ಬರಲು ನನಗೆ ಆಗುವುದಿಲ್ಲ". ನಂತರ ಯಾವ ಶಬ್ಧವು ಇಲ್ಲದೆ ಕಣ್ಣನ್ನು ಮುಚ್ಚಿದನು.

ಬೆಳಗ್ಗೆ ಶಾಂತವಾಗಿದ್ದಂತ ತನ್ನ ಕೋಣೆಯಲ್ಲಿ ಇದ್ದಕ್ಕಿದಂತೆ ಒಂದು ಪ್ರಕಾಶಮಾನವಾದ ಬೆಳಕು."ಜಿಮ್, ನೀನು ಯಾವಾಗಲೂ ಕರೆಯುವ ಯೇಸು ಬಂದಿದ್ದೇನೆ" ಎಂಬ ಸ್ವರವೊಂದು ಕೇಳಿಸಿತು. ಈ ಶಬ್ಧ ಕೇಳಿಸಿದ ತಕ್ಷಣ ಜಿಮ್ ತನ್ನ ಕಣ್ಣನ್ನು ತೆರೆದನು. ಅವನ ಮಂಚ ಬಳಿಯಲ್ಲಿ ಯೇಸು ಸ್ವಾಮಿ ನಿಂತು ಕೊಂಡಿದ್ದನು. ಜಿಮ್ ತಕ್ಷಣ ಮಂಚದಿಂದ ಎದ್ದು ಕುಳಿತನು. ಇದು ಕನಸ? ಅಥವಾ ನಿಜವಾಗಲೂ ಯೇಸು ನನ್ನನ್ನು ಹುಡುಕಿ ಬಂದಿದ್ದಾರೆಯೆ? ಎಂದು ಅತ್ಯಾಶ್ಚರ್ಯದಿಂದ ನೋಡಿದನು. ಯೇಸು ತನ್ನ ಕೈಯಿಂದ ಅವನ ತಲೆಯನ್ನು ಮುಟ್ಟಿ ಸವರಿ ಆಶೀರ್ವದಿಸಿ ಮರೆಯಾದನು.

ಕೆಲವು ಕ್ಷಣದೊಳಗೆ ಡಾಕ್ಟರ್ ಅವನನ್ನು ಪರೀಕ್ಷಿಸಲು ಬಂದಾಗ ಅವರಿಗೆ ಬಹು ಆಶ್ಚರ್ಯವಾಗಿತ್ತು. "ಜಿಮ್! ನಿನಗೆ ಏನಾಯಿತು. ನೀನು ಹೇಗೆ ಹಾಸಿಗೆಯನ್ನು ಬಿಟ್ಟು ಎದ್ದೆ? ಈಗ ನೀನು ಬಹು ಗುಣವಾಗಿದ್ದಿಯಲ್ಲವೆ. ನಿನಗೆ ಇಷ್ಟೊಂದು ಬೇಗ ಹೇಗೆ ವಾಸಿಯಾಯಿತು?" ಎಂದು ಕೇಳಿದರು.

ಆ ತಕ್ಷಣವೇ ಜಿಮ್,"ಡಾಕ್ಟರ್, ನನಗೆ ಎಲ್ಲವು ಗುಣವಾಯಿತು. ನನಗೆ ಪ್ರತಿದಿನವು ದೇವಾಲಯಕ್ಕೆ ಹೋಗಿ ಯೇಸುವಿನ ಬಳಿ, ನಾನು ಜಿಮ್ ಬಂದಿದ್ದೇನೆ ಎಂದು ಹೇಳುವೆನು. ಆದರೆ ಈವತ್ತು ನಾನು ಹೋಗಲು ಆಗದ ಕಾರಣ ಆತನೆ ನನ್ನನ್ನು ನೋಡಲು ಬಂದನು. ನನ್ನನ್ನು ಮುಟ್ಟಿ ಗುಣಪಡಿಸಿದನು. ನನ್ನ ಗಾಯಗಳೆಲ್ಲವೂ ವಾಸಿಯಾಗಿಬಿಟ್ಟಿತು" ಎಂದು ಬಹು ಆನಂದದಿಂದ ಹೇಳಿದನು.

ಎಂಥಾ ಆಶ್ಚರ್ಯ! ಯೇಸುವನ್ನು ಹುಡುಕಿದಂತ ಜಿಮ್ಮನ್ನು ತಕ್ಷಣ ಗುಣಹೊಂದಿದನು. ಅವನು ಆಸ್ಪತ್ರೆಯಲ್ಲಿ ಇದ್ದರೂ ಯೇಸು ಅವನನ್ನು ಹುಡುಕಿ ಬಂದು ಗುಣಪಡಿಸಿದನು.

ಹೌದು ಪ್ರಿಯರೆ! ನಿಮ್ಮ ರೋಗದ ಸಮಯದಲ್ಲಿ ನೀವು ಯೇಸುವನ್ನು ದೃಷ್ಟಿಸಿ ಕರೆದರೆ, ಆತನು ಖಂಡಿತವಾಗಿ ನಿಮಗೆ ಗುಣವನ್ನು ನೀಡುವನು. ಯೇಸು ಜೀವಿಸಿದಂತ ಕಾಲದಲ್ಲಿ ಅನೇಕ ರೋಗಿಗಳನ್ನು ಗುಣಪಡಿಸಿದನು,ಕುರುಡರಿಗೆ ಕಣ್ಣು ಬಂದಿತು. ಕುಷ್ಟರೋಗಿಗಳು ಗುಣ ಹೊಂದಿದರು.ಸತ್ತಂತವರನ್ನು ಕೂಡ ನಾಲ್ಕು ದಿನಗಳ ನಂತರ ಜೀವಂತವಾಗಿ ಎಬ್ಬಿಸಿದನು.

38ವರ್ಷ ಏಳಲು ಸಾಧ್ಯವಾಗದೆ ಹಾಸಿಗೆಯಲ್ಲೆ ಬಿದ್ದುಕೊಂಡಿದ್ದ ಮನುಷ್ಯನನ್ನು ನೋಡಿ,"ಎದ್ದೇಳು! ನಿನ್ನ ಹಾಸಿಗೆಯನ್ನು ಎತ್ತಿಕೊಂಡು ನಡೆ" ಎಂದು ಒಂದೇ ಒಂದು ಮಾತನ್ನು ಆಡಿದನು. ಅವನ ಕೈಕಾಲು ಗುಣಹೊಂದಿ ಎದ್ದು ನಡೆದು ಹೋದನು.

ಮಾನವನು ತಾನು ಮಾಡುವ ಪಾಪದಿಂದ ಉಂಟಾಗುವ ಶಾಪದ ದೆಸೆಯಿಂದಲೇ ಘೋರವಾದ ರೋಗಗಳಿಗೆ ತುತ್ತಾಗುತ್ತಾನೆ. ಎಷ್ಟು ಹಣಖರ್ಚು ಮಾಡಿದರು ಗುಣಹೊಂದಲು ಆಗಲಿಲ್ಲ. ಡಾಕ್ಟರ್ ಇನ್ನು ಮೇಲೆ ಗುಣಪಡಿಸಲು ಸಾಧ್ಯವಿಲ್ಲವೆಂದು ಕೈಬಿಟ್ಟುಬಿಡುತ್ತಾರೆ. ಆದರೆ ನಾವು ಇಂದು ಪರಿಚಯಿಸುವಂತ ವೈದ್ಯರು ಎಂತಹ ರೋಗವಾಗಿದ್ದರು ಗುಣಪಡಿಸಲು ಶಕ್ತನಾಗಿದ್ದಾನೆ.ಆತನೇ ದೇವರಾದ ಯೇಸು ಕ್ರಿಸ್ತನು. ಆತನಿಂದ ಗುಣಹೊಂದಿದ ರೋಗ ಯಾವುದು ಕೂಡ ಇಲ್ಲ.

*ನಿಮ್ಮಲ್ಲಿ ಯಾವ ವ್ಯಾಧಿಯೂ ಉಂಟಾಗದಂತೆ ಯೆಹೋವನು ಮಾಡುವನು.*
*(ಧರ್ಮೋ 7:15)*

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ರೆ ಅದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಚಿಸಿ ಪುಸ್ತಕ ಮತ್ತು ಸಿ.ಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.

**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA